**<u>ದಿನಾಂಕಃ 22.10.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ-ಪ್ರತಿ ವಾದಿ ಪರ ಶ್ರೀ ಸಿ.ಎಲ್.ಎಸ್ .ವಕೀಲರಿಂದ</u>**

1) ದಿಃ10.02.2016 ರಂದು 1ನೇ ಪ್ರತಿವಾದಿ ರವರ ಮಗ ಕೆಂಪರಾಜು ಮೃತಪಟ್ಟದ್ದಾರೆ ಎಂದರೆ ಸರಿ. ಸದರಿ ಕೆಂಪರಾಜು ರವರ ಹೆಂಡತಿ ರಾಜಮ್ಮ ಎಂದರೆ ಅವರ ಹೆಸರು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಕೆಂಪರಾಜು ರವರು ಮರಣ ಹೊಂದಿದ ಸಮಯದಲ್ಲಿ ಅವರು ಬಂದಿರಲಿಲ್ಲ. ಸದರಿ ಕೆಂಪರಾಜು ರವರಿಗೆ ವಸಂತಮ್ಮ ಮತ್ತು ಸಂಜೀಮ್ಮ ಎಂಬ ಇಬ್ಬರು ಹೆಣ್ಣುಮಕ್ಕಳು ಇದ್ದಾರೆ ಎಂದರೆ ಸರಿ. ನಮ್ಮ ತಂದೆ ಪ್ರಸ್ತುತ ದಾವೆ ದಾಖಲು ಮಾಡಿದ ನಂತರ ಕೆಂಪರಾಜು ರವರು ಮರಣ ಹೊಂದಿದ್ದು ಎಂದರೆ ಸರಿ. ಅವರ ಮರಾಣಾನಂತರ ಅವರ ಎಲ್ಲಾ ವಾರಸುದಾರರನ್ನು ಈ ದಾವೆಯಲ್ಲಿ ಸೇರಿದ್ದೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ಸದರಿ ಕೆಂಪರಾಜು ರವರ ಮರಣಾ ನಂತರ ಅವರ ಹೆಂಡತಿ ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿರಲಿಲ್ಲ ಎಂದರೆ ಹೌದು. ಸಾಕ್ಷಿ ಮುಂದುವರೆದು ನನಗೆ ಅಷ್ಟು ಜ್ಞಾನ ಇರಲಿಲ್ಲ ಎಂದು ನುಡಿಯುುತ್ತಾರೆ. ಸದರಿಯವರನ್ನು ಪಕ್ಷಗಾರರನ್ನಾಗಿ ಮಾಡಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದು ನುಡಿಯುತ್ತಾರೆ.

2) ನಮ್ಮ ತಾತ ಸಿದ್ದಯ್ಯರವರಿಗೆ ಒಟ್ಟು 8 ಜನ ಮಕ್ಕಳು. ಸಿದ್ದರಾಮ, ಮರಿಸಿದ್ದಮ್ಮ, ವೆಂಕಟೇಶ್, ಶ್ರೀನಿವಾಸ ಮೂರ್ತಿ, ವೆಂಕಟಲಕ್ಷ್ಮಮ್ಮ, ದೇವರಾಜಮ್ಮ, ಮತ್ತು ಪುಟ್ಟಗೌರಮ್ಮ. ಸದರಿಯವರನ್ನು ನಿಮ್ಮ ತಂದೆಯಾಗಲೀ ಅಥವಾ ನೀವಾಗಲೀ ಪ್ರಸ್ತುತ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ದರಿಯವರನ್ನು ಪಕ್ಷಗಾರರನ್ನಾಗಿ ಮಾಡಲು ನಿಮಗೆ ತೊಂದರೆ ಇತ್ತೇ ಎಂದರೆ ಯಾವುದೇ ತೊಂದರೆ ಇರಲಿಲ್ಲ ಆದರೆ ಸದರಿಯವರು ಕೋರ್ಟ ಕಛೇರಿಗೆ ಬರಲು ಇಷ್ಟವಿಲ್ಲ ನೀವು ಏನಾದರೂ ಮಾಡಿಕೊಳ್ಳಿ ಎಂದು ಹೇಳಿದರು.

3) ನಮ್ಮ ತಾತ ಸಿದ್ದಯ್ಯ ಹಾಗೂ ಮುತ್ತಾತ ಮರಿಕೆಂಪಯ್ಯನ ಸಿದ್ದಯ್ಯ ವಂದಾರ ಗುಪ್ಪೆಯಲ್ಲಿ ವಾಸವಿದ್ದರು ಎಂಬ ವಿಚಾರವನ್ನು ನನ್ನ ವಾದಪತ್ರದಲ್ಲಿ ಹಾಗೂ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಿಸಿದ್ದೇನೆ. ಈ ಬಗ್ಗೆ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಬಗ್ಗೆ ನ್ಯಾಯಾಲಯಕ್ಕೆ ಯಾವುದಾದರೂ ದಾಖಲಾತಿಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಪಡಿತರ ಚೀಟಿ ಹಾಜರುಪಡಿಸಿದ್ದೇನೆ ಎಂದುನುಡಿಯುತ್ತಾರೆ. ನಾನು ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ ನಮ್ಮ ತಾತ ಸಿದ್ದಯ್ಯ ಹಾಗೂ ಮುತ್ತಾತ ಮರಿಕೆಂಪಯ್ಯನ ಸಿದ್ದಯ್ಯ ವಂದಾರ ಗುಪ್ಪೆಯಲ್ಲಿ ವಾಸವಿರಲಿಲ್ಲ ಹಾಗೂ ಈ ಈ ಬಗ್ಗೆ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಾತ ಸಿದ್ದಯ್ಯ ಹಾಗೂ ಮುತ್ತಾತ ರವರು ಮಂಗಳವಾರ ಪೇಟೆಯಲ್ಲಿ ವಾಸವಾಗಿದ್ದರು ಎಂದರೆ ಸಾಕ್ಷಿ ನಂತರ ನನ್ನ ತಾತನವರು ವಂದಾರ ಗುಪ್ಪೆಯಿಂದ ಮಂಗಳವಾರ ಪೇಟೆಗೆ ಬಂದರು.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ.**
**ನ್ಯಾಯಾಲಯ, ಚನ್ನಪಟ್ಟಣ.**